ಸೂಳ್ಯ ತಾಲ್ಲೂಕಿನ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಪದವಿ ಪೂರ್ವ ಕಾಲೇಜು ಕುರಿತು.

೧೩.೬೫(೧೭೫೮)

ಶ್ರೀ ಅಂಗಾರ ಎಸ್.(ಸೂಳ್ಯ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕಿನಲ್ಲಿ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಪದವಿ ಪೂರ್ವ ಕಾಲೇಜನ್ನು ಯಾವಾಗ ಪ್ರಾರಂಭಿಸಲಾಗಿದೆ. ಪ್ರಾರಂಭದಲ್ಲಿ ಎಷ್ಟು ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಅವು ಯಾವ ಹುದ್ದೆಗಳು; ಯಾವ ಯಾವ ವರ್ಗಕ್ಕೆ ಮೀಸಲಿರಿಸಿದ ಹುದ್ದೆಗಳು; ವಿವರ ನೀಡುವುದು.

ಆ) ಮೀಸಲಿರಿಸಿದ ಹುದ್ದೆಗಳನ್ನು ಬೇರೆ ವರ್ಗದವರಿಗೆ ಬದಲಾವಣೆ ಮಾಡಿ ನೇಮಕಾತಿ ಮಾಡಲಾಗಿದೆಯೆ? ನೇಮಕಾತಿ ಮಾಡುವಾಗ ಯಾವ ಷರತ್ತುಗಳ ಆಧಾರದ ಮೇಲೆ ನೇಮಕಾತಿ ಮಾಡಲಾಗಿದೆ. ಚೆಕ್‌ಲಿಸ್ಟ್‌ನ ಪ್ರತಿ ನೀಡುವುದು;

ಶ್ರೀ ಹೆಚ್.ವಿಶ್ವನಾಥ್: (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಸುಳ್ಯ ತಾ:ನ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಪ.ಪೂ.ಕಾಲೇಜನ್ನು ೧೯೭೨-೭೩ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಪ್ರಾರಂಭದಲ್ಲಿ ಈ ಕೆಳಕಂಡ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

ಬೋಧಕ ಹುದ್ದೆಗಳು - ೧೩

ಬೋಧಕೇತರ ಹುದ್ದೆಗಳು -೦೯

ಹುದ್ದೆಗಳ ವಿವರ	ಮೀಸಲಾತಿ ವಿವರ
ಪ್ರಾಚಾರ್ಯರ ಹುದ್ದೆ	ಮೀಸಲಾತಿ ಅನ್ವಯಿಸುವುದಿಲ್ಲ
ಭಾಷಾ ಉಪನ್ಯಾಸಕರು - ೪	
ಕನ್ನಡ	ಸಾಮಾನ್ಯ
ಇಂಗ್ಲೀಷ್	ಸಾಮಾನ್ಯ
ಹಿಂದಿ	ಸಾಮಾನ್ಯ

ಸಂಸ್ಕೃತ	ಎಸ್.ಸಿ

ಕಲಾವಿಭಾಗದ ಉಪನ್ಯಾಸಕರು - ೪

ಇತಿಸಾಹ	ಸಾಮಾನ್ಯ
ಅರ್ಥಶಾಸ್ತ್ರ	ಎಸ್.ಸಿ.
ರಾಜ್ಯಶಾಸ್ತ್ರ	ಸಾಮಾನ್ಯ
ಸಮಾಜಶಾಸ್ತ್ರ	ಎಸ್.ಸಿ
ವಾಣಿಜ್ಯ ಶಾಸ್ತ್ರ	ಸಾಮಾನ್ಯ.

ವಿಜ್ಞಾನ ವಿಭಾಗದ ಉಪನ್ಯಾಸಕರು - ೪

ಭೌತಶಾಸ್ತ್ರ	ಸಾಮಾನ್ಯ
ರಸಾಯನಶಾಸ್ತ್ರ	ಸಾಮಾನ್ಯ
ಗಣಿತ ಶಾಸ್ತ್ರ	ಸಾಮಾನ್ಯ
ಜೀವಶಾಸ್ತ್ರ	ಎಸ್.ಸಿ.

ಬೋಧಕೇತರ ಹುದ್ದೆಗಳು - ೮

ಪ್ರಥಮ ದರ್ಜೆ ಸಹಾಯಕ	ಸಾಮಾನ್ಯ(ಬಡ್ತಿ)
ದ್ವಿತೀಯ ದರ್ಜೆ ಸಹಾಯಕ	ಸಾಮಾನ್ಯ
ಅಟೆಂಡರ್ (ಲ್ಯಾಬ್)	ಬಿ.ಸಿ.ಎಂ.
ಅಟೆಂಡರ್(ಲ್ಯಾಬ್) (ಖಾಲಿ)	ಬಿಸಿಎಂ
ಅಟೆಂಡರ್	ಸಾಮಾನ್ಯ (ಬಡ್ತಿ)
ಜವಾನ	ಎಸ್.ಟಿ.
ದ್ವಿ.ದ.ಸ. ಸಹಿತ ಬೆರಳಚ್ಚುಗಾರ	ಎಸ್.ಸಿ.

ಜವಾನ (ಖಾಲಿ) ಸಾಮಾನ್ಯ

ಅ) ಈ ಪ.ಪೂ.ಕಾಲೇಜಿನಲ್ಲಿ ದೈಹಿಕ ಶಿಕ್ಷಕರ ಹುದ್ದೆಯನ್ನು ಪರಿಶಿಷ್ಟ ಪಂಗಡದ ಅಭ್ಯರ್ಥಿಯಿಂದ ತುಂಬಲು ದಿ:೧೯.೧೧.೯೯ರಂದು ಇಲಾಖೆಯಿಂದ ಅನುಮತಿ ನೀಡಲಾಗಿತ್ತು. ಸರ್ಕಾರಿ ಆದೇಶ ಸಂ:ಇಡಿ ೧೪೨ ಎಸ್‌ಎಲ್‌ಬಿ ೯೮ ದಿ:೩.೨.೨೦೦೦ರನ್ವಯ ದೈಹಿಕ ಶಿಕ್ಷಕರ ಹುದ್ದೆಯು ''ಏಕವ್ಯಂದ''. ಇದಕ್ಕೆ ಮೀಸಲಾತಿ ಅನ್ವಯಿಸದ ಕಾರಣ ಈ ಹುದ್ದೆಯನ್ನು ಸಾಮಾನ್ಯ ಅಭ್ಯರ್ಥಿಯಿಂದ ತುಂಬಲು ಮತ್ತು ನಿವೃತ್ತಿಯಿಂದ ತೆರವಾದ ಜೀವಶಾಸ್ತ್ರ ಉಪನ್ಯಾಸಕರ ಹುದ್ದೆಯನ್ನು ಪ.ಪಂಗಡದ ಅಭ್ಯರ್ಥಿಯಿಂದ ತುಂಬಲು ಆಡಳಿತ ಮಂಡಳಿಯು ಕೋರಿತ್ತು. ಅವರ ಕೋರಿಕೆಯಂತೆ ಪರಿಶೀಲಿಸಲಾಗಿ ಈ ಪದವಿ ಪೂರ್ವ ಕಾಲೇಜಿನಲ್ಲಿ ಒಂದು ಪರಿಶಿಷ್ಟ ಪಂಗಡದ ಮತ್ತು ಒಂದು ಪರಿಶಿಷ್ಟ ಜಾತಿಯ ಉಪನ್ಯಾಸಕರ ಹುದ್ದೆಯು ಬ್ಯಾಕ್‌ಲಾಗ್ ಇದ್ದುದರಿಂದ ಜೀವಶಾಸ್ತ್ರ ಉಪನ್ಯಾಸಕರ ಹುದ್ದೆಯನ್ನು ಪರಿಶಿಷ್ಟ ಪಂಗಡದ ಮತ್ತು ಬಡ್ತಿಯಿಂದ ತೆರವಾದ ಅರ್ಥಶಾಸ್ತ್ರ ಉಪನ್ಯಾಸಕರ ಹುದ್ದೆಯನ್ನು ಪರಿಶಿಷ್ಟ ಜಾತಿಯ ಅಭ್ಯರ್ಥಿಯಿಂದಲೂ ದೈಹಿಕ ಶಿಕ್ಷಕರ ಹುದ್ದೆಯನ್ನು ಸಾಮಾನ್ಯ ಅಭ್ಯರ್ಥಿಯಿಂದಲೂ ತುಂಬಲು ಅನುಮತಿ ನೀಡಲಾಗಿದೆ.

ಸೂಳ್ಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಾಖಲಿಸಿಕೊಳ್ಳಲಾದ ರೋಗಿಗಳು.

೧೩೬೬(೧೭೫೯)

ಶ್ರೀ ಅಂಗಾರ ಎಸ್.(ಸೂಳ್ಯ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ೧೯೯೫-೯೬ ರಿಂದ ೯೮-೯೯ ರವರೆಗೆ ಎಷ್ಟು ಜನ ರೋಗಿಗಳನ್ನು ದಾಖಲಿಸಿಕೊಳ್ಳಲಾಗಿದೆ.

ಆ) ಯಾವ ಯಾವ ರೋಗಕ್ಕೆ ಸಂಬಂಧಿಸಿದವರು ವಿವರವನ್ನು ವರ್ಷವಾರು ನೀಡುವುದು?

ಡಾ: ಎ.ಬಿ.ಮಾಲಕ ರೆಡ್ಡಿ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ವರ್ಷ ದಾಖಲಾಗಿರುವ ರೋಗಿಗಳ ಸಂಖ್ಯೆ

೧೯೯೫ ೬೯೫